ವಿಲಾರ್ಸ್ ಸ್ವಿಝರ್ಲ್ಯಾಂಡಿನ ಪ್ರಕೃತಿ ಸಂಪದ್ಭರಿತ ಪುಟ್ಟ ಹಿಲ್ ಸ್ಟೇಶನ್. ಸಮುದ್ರಮಟ್ಟದಿಂದ ಸುಮಾರು 8000 ಅಡಿಗಳಷ್ಟು ಎತ್ತರದಲ್ಲಿರುವ ವಿಲಾರ್ಸ್, ಆಲ್ಪ್ಸ್ ಪರ್ವತ ಶ್ರೇಣಿಯಲ್ಲಿದ್ದು, ಸ್ವಿಝರ್ಲ್ಯಾಂಡ್, ಆಸ್ಟ್ರಿಯ ಮತ್ತು ಜರ್ಮನಿಯ ಗಡಿಯಲ್ಲಿದೆ. ಜಗತ್ತಿನ ಸುಪ್ರಸಿದ್ಧ ಪ್ರವಾಸಿ ತಾಣ ಲೇಕ್ ಜಿನೀವಾ ಪ್ರದೇಶದಲ್ಲಿದೆ. ಹಿಂದಿನ ದಿನ ನಾವಿದ್ದ ಇಂಟರ್ಲಾಕೆನ್ ಪಟ್ಟಣದಿಂದ, ಲೂಸರ್ನ್ ಮೂಲಕ ದಿನವಿಡೀ ಪ್ರಯಾಣದ ನಂತರ ವಿಲಾರ್ಸ್ ಸೇರಿದಾಗ, ಆಕಾಶದಲ್ಲಿ ಸಂಜೆಗೆಂಪು ಮೂಡಿತ್ತು.

ವಿಲಾರ್ಸ್ ಸ್ವಿಝರ್ಲ್ಯಾಂಡಿನ ಸುಂದರ ತಾಣವೊಂದೇ ಅಲ್ಲ; ಜಗತ್ತಿನ ಪ್ರತಿಷ್ಠಿತ ಶ್ರೀಮಂತರ ಮಕ್ಕಳು ಓದುವ ತಾಣವೂ ಹೌದು. ಬಾಲಿವುಡ್ ನಟ ಅಭಿಷೇಕ್ ಬಚ್ಚನ್ ಓದಿದ ಐಗ್ಲೊ ಶಾಲೆ ಇರುವುದು ಇಲ್ಲೇ. ವಿಲಾರ್ಸ್‌ನ ವಿಶೇಷತೆಯ ಬಗ್ಗೆ ನಮ್ಮ ಪ್ರವಾಸದ ಗೈಡ್ ಮೊದಲೇ ಸೂಚನೆ ನೀಡಿದ್ದರಿಂದ, ವಿಲಾರ್ಸ್ ಬಗ್ಗೆ ಕುತೂಹಲದಿಂದಲೂ, ಕಾತುರದಿಂದಲೂ ಎದುರು ನೋಡುತ್ತಿದ್ದುದಂತೂ ನಿಜ.



ಪ್ರವಾಸಿಗರ ಪಾಲಿಗೆ ಇದು ಜಗತ್ಪ್ರಸಿದ್ಧವಾದರೂ, ಈ ಊರಿನಲ್ಲಿ ಇರುವುದೊಂದೇ ಮುಖ್ಯ ಬೀದಿ! ಅದರಲ್ಲೇ ಪುಟ್ಟ ರೈಲು ನಿಲ್ದಾಣ, ಒಂದಷ್ಟು ಅಂಗಡಿಗಳು ಮತ್ತು ಹೋಟೆಲ್‌ಗಳು. ಮಾರನೇ ದಿನ ಬೆಳಿಗ್ಗೆ ಬಿಸಿ ಕಾಫಿ ಕುಡಿದು ತಣ್ಣಗೆ ಕೊರೆಯುವ ಚಳಿಯಲ್ಲಿ ಹೊರ ಹೊರಟೆವು. ರಾತ್ರಿ ಬಿದ್ದಿದ್ದ ಮಂಜನ್ನು ತೆಗೆದು ರಸ್ತೆ ತೆರವು ಮಾಡಲಾಗಿತ್ತು. ಇಬ್ಬನಿಯ ಭಾರದಿಂದ ಬಾಗಿದ ಹಸಿರುಗೆಂಪು ಎಲೆಗಳು, ರಸ್ತೆಯ ಬದಿಯ ಕುಂಡಗಳಲ್ಲಿ ಕಂಗೊಳಿಸುತ್ತಿದ್ದ ಗುಲಾಬಿ, ಟ್ಯೂಲಿಪ್ ಹೂಗಳ ಸಂಭ್ರಮ! ಎಲ್ಲೆಲ್ಲೂ ಶುಭ್ರವಾದ, ಸ್ವಚ್ಛ, ನಿರ್ಮಲ ವಾತಾವರಣ.

ಇಲ್ಲಿನ ಪ್ರಾಕೃತಿಕ ಸೌಂದರ್ಯ ದೈವದತ್ತ ಕೊಡುಗೆ. ಆದರೆ ಅದನ್ನು ಅಭಿವೃದ್ಧಿಯ ಮಧ್ಯೆಯೂ ಕಾಪಾಡಿಕೊಂಡು ಬಂದಿರುವುದು ಯೂರೋಪಿನ ವ್ಯವಸ್ಥೆಯ ಸಾರ್ಥಕತೆ. ಪರಿಸರ ಸಂರಕ್ಷಣೆಯ ಕಾಳಜಿಯಂತೂ ಅದ್ಭುತವೇ. ಯೂರೋಪಿನಲ್ಲಿ ಎಲ್ಲಿ ಹೋದರೂ ಸಾಮಾನ್ಯವಾಗಿ ನಮ್ಮ ಗಮನ ಸೆಳೆಯುವ ಅಂಶವೇ ಇದು.

ವಿಲಾರ್ಸ್ ಬೇರೆಲ್ಲ ಯೂರೋಪಿನ ಪ್ರೇಕ್ಷಣೀಯ ಸ್ಥಳಗಳಂತಲ್ಲ. ಬೆಳಗಾದೊಡನೆ ಶಾಲೆ, ಕಾಲೇಜಿನ ವೇಳಾಪಟ್ಟಿಯಂತೆ, ಕಿರಿಕಿರಿ ಉಂಟಾಗುವಂತೆ, ಸಮಯದ ನಿರ್ವಹಣೆಯ ಒತ್ತಡವನ್ನು ಗೈಡ್ ಹೇರುವ ಅವಶ್ಯಕತೆಯೂ ಇಲ್ಲ. ಏಕೆಂದರೆ ಇಲ್ಲಿರುವುದು, ಅನುಭವಿಸ ಬೇಕಾಗಿರುವುದು ಇಲ್ಲಿನ ಪರಿಸರದ ಸೌಂದರ್ಯ. ಜತೆಗೆ ಇಲ್ಲಿ ಮಾಡಬಹುದಾದ ಅನೇಕ ಆರೋಗ್ಯಕರ ಚಟುವಟಿಕೆಗಳಿವೆ. ಇದೊಂದು ಗಡಿಬಿಡಿಯ ಪ್ರವಾಸದ ನಡುವೆ, ಮನಸ್ಸಿಗೂ, ದೇಹಕ್ಕೂ ಆರಾಮವನ್ನು ನೀಡಿ, ನಮ್ಮ ಯೌವನವನ್ನು ಪುನರುಜ್ಜೀವನಗೊಳಿಸುವ ತಾಣ. ಜೊತೆಗೆ, ಮದುವೆಯ ಹೊಸ ಜೀವನದ ಅಂಚಿನಲ್ಲಿ ಇರುವವರಿಗೆ, ಮಧುಚಂದ್ರಕ್ಕೆ ಯಾವ ತಾಣಕ್ಕೆ ಹೋಗಬೇಕೆನ್ನುವ ಗೊಂದಲದಲ್ಲಿ ಇರುವವರಿಗೆ ಇದು ನಿಜಕ್ಕೂ ಪ್ರಶಸ್ತ ತಾಣ.

ಯೂರೋಪಿನ ಬೇಸಿಗೆ ಮತ್ತು ಚಳಿಗಾಲದ ಚಟುವಟಿಕೆಗಳು ವಿಭಿನ್ನ; ಋತುಮಾನ, ನಮ್ಮ ಸಾಮರ್ಥ್ಯ, ಆಸಕ್ತಿಗೆ ಅನುಗುಣವಾಗಿ ಅದನ್ನು ಇಲ್ಲಿ ನಾವೇ ನಿರ್ಧರಿಸಬೇಕು.

ವಾಕಿಂಗ್: ಇಲ್ಲಿನ ಹಸಿರು ವನರಾಶಿಯ ನಡುವೆ, ನೂರಾರು ಕಿ.ಮೀ.ಗಳಷ್ಟು ಸಿದ್ಧಗೊಳಿಸಿದ ಕಾಲುದಾರಿಗಳಿವೆ ಎಂದರೆ ಆಶ್ಚರ್ಯವಾದೀತು. ಅಷ್ಟೇ ಅಲ್ಲ;